## ನನಗೂ ಗೊತ್ತು...

ಸಾಫ್ಟ್‌ವೇರ್ ಎಂಜಿನಿಯರ್ ಆಗಿರುವ ನಮ್ಮ ನೆಂಟರ ಹುಡುಗ ಇತ್ತೀಚೆಗೆ ಆಸ್ಟ್ರೇಲಿಯಾದಿಂದ ಹಿಂದಿರುಗಿದ್ದ. ಅಲ್ಲಿನ ಅನುಭವ, ದೇಶ, ಕೆಲಸದ ಬಗ್ಗೆ ನಮ್ಮೊಂದಿಗೆ ವಿವರಿಸುತ್ತಿದ್ದ. ಆತನ ಮಾತನ್ನು ನಾವೆಲ್ಲಾ ಏಕಾಗ್ರತೆಯಿಂದ ಆಲಿಸುತ್ತಿದ್ದೆವು. ನಮ್ಮ ನಾದಿನಿ ಮಗ ಶ್ರೀನಿಧಿ ಚೂಟಿ. ಆತನ ಬಳಿ ಶ್ರೀನಿಧಿ, 'ತನಗೂ ಆಸ್ಟ್ರೇಲಿಯಾ ದೇಶದವರು ಕೆಲವರು ಗೊತ್ತು' ಎಂದಾಗ ನಾವೆಲ್ಲಾ ದಂಗು ಬಡಿದೆವು. 'ಹೌದು, ಸ್ಮಿತ್, ಹೆಡ್, ಫಿಂಚ್, ವಾರ್ನರ್, ಜಂಪಾ, ಮ್ಯಾಕ್ಸ್‌ವೆಲ್...' ಎಂದು ಕ್ರಿಕೆಟಿಗರ ಹೆಸರು ಹೇಳುತ್ತಲೇ ಇದ್ದ!

**ಗುರುದೇವ್ ಭಂಡಾರ್ಕರ್**





ಚಿತ್ರಗಳು: ಗಣೇಶ ಆಚಾರ್ಯ

## 'ದೋಣಿ ಸಾಗಲಿ'

ಆಗ ಶ್ರಾವಣಮಾಸ. ಮನೆಯಲ್ಲಿ ಜೋಕಾಲಿ ಕಟ್ಟಿದ್ದೆವು. ಎಲ್ಲರಿಗೂ ಒಂದೊಂದು 'ಬೋರ ಬಟ್ಲಾ' ಕಟ್ಟಿ ಕೊಟ್ಟಿದ್ದರು. (ಒಣ ಕೊಬ್ರಿಗೆ ಮಧ್ಯದಲ್ಲಿ ರಂಧ್ರ ಮಾಡಿ ಅದರಲ್ಲಿ ದಾರ ಪೋಣಿಸಿ ಬುಗುರಿ ತರಹ ಆಡಿಸುವದು.) ನಮ್ಮಕ್ಕ ಜೋಕಾಲಿಯಲ್ಲಿ ಕೂತು 'ಬೋರ ಬಟ್ಲಾ' ಆಡಿಸುತ್ತಿದ್ದಳು. ಅವಳು ಬಹಳ ಚೆನ್ನಾಗಿ ಹಾಡುತ್ತಾಳೆ. 'ಅಕ್ಕಾ, 'ದೋಣಿ ಸಾಗಲಿ ಮುಂದೆ ಹೋಗಲಿ' ಹಾಡು' ಎಂದು ಹೇಳಿದೆವು. ಅವಳು 'ದೋಣಿ ಸಾಗಲಿ ಮುಂದೆ ಹೋಗಲಿ... ದೂರ ತೀರವ ಸೇರಲಿ...' ಎಂದು ಹಾಡುತ್ತಿದ್ದಳು. ಟೀವಿಯಲ್ಲಿ ಕ್ರಿಕೆಟ್ ನೋಡುತ್ತಿದ್ದ ನನ್ನ ತಮ್ಮ 'ದೋನಿ ಸಾಗಲೆ ಮುಂದೆ ಹೋಗಲೆ, ಆ ಕಡೆಯ ತೀರವ ಸೇರಲೆ ರನ್ ಮಾಡಲೇ, ಗಾಳಿಯಲ್ಲಿ ತೇಲಿಬರುವ ಚೆಂಡನ್ನು ಹೊಡೆಯಲೇ...' ಎಂದು ಅದೇ ರಾಗದಲ್ಲಿ ಹಾಡಿದಾಗ ಎಲ್ಲರೂ ನಕ್ಕ ನಗು ಕೇಳಿದವರನ್ನು ಬೆಚ್ಚಿಬೀಳಿಸುವಂತಿತ್ತು!

**'ವೃಂದಾ'**